# ಕರ್ನಾಟಕ ವಿಧಾನ ಸಭೆ

ಗುರುವಾರ 27ನೇ ಏಪ್ರಿಲ್ 2000ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 10- 10 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರು: (ಶ್ರೀ: ಎಂ.ವಿ.ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

## 1) ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.**

ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ನೀಡಿರುವ ಗ್ರಾನೈಟ್ ಲೈಸೆನ್ಸ್.

317( 3099)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ( ಅಂಕೋಲ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ಗ್ರಾನೈಟ್ ತೆಗೆಯಲು ಯಾವ ಯಾವ ವ್ಯಕ್ತಿ ಸಂಸ್ಥೆಗಳಿಗೆ ಈವರೆಗೆ ಲೈಸನ್ಸ್ ನೀಡಲಾಗಿದೆ.(ವಿವರ ಒದಗಿಸುವುದು)

ಆ) ಲೈಸನ್ಸ್ ಪಡೆದ ಎಷ್ಟು ವ್ಯಕ್ತಿ, ಸಂಸ್ಥೆಗಳು ಎಷ್ಟು ಪ್ರಮಾಣದ ಗ್ರಾನೈಟ್ ಹೊರತೆಗೆದಿದ್ದಾರೆ. ಆ ವ್ಯಕ್ತಿ/ಸಂಸ್ಥೆಗಳಿಂದ ಸರ್ಕಾರಕ್ಕೆ ಸಂದಾಯವಾದ ರಾಜಧನ ಎಷ್ಟು?

ಇ) ಲೈಸನ್ಸ್ ಷರತ್ತು ಉಲ್ಲಂಘಿಸಿದ ಎಷ್ಟು ವ್ಯಕ್ತಿ ಸಂಸ್ಥೆಗಳ ಲೀಸ್ ರದ್ದುಗೊಳಿಸಲಾಗಿದೆ?

ಶ್ರೀ ವಿ.ಮುನಿಯಪ್ಪ( ಗಣಿ ಮತ್ತು ಭೂ ವಿಜ್ಞಾನ ಇಲಾಖೆ):

ಅ) 240 ಲೈಸನ್ಸ್‌ಗಳನ್ನು ನೀಡಲಾಗಿದೆ. ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. (ಅನುಬಂಧ-ಅ)

ಆ) ಒಟ್ಟು 71285.154 ಕ್ಯೂಬಿಕ್ ಮೀಟರ್ ಗ್ರಾನೈಟ್ ಹೊರತೆಗೆದು ಇದರಿಂದ 992.2666 ಲಕ್ಷ ರಾಜಧನ ಸಂದಾಯವಾಗಿರುತ್ತದೆ. ಪಟ್ಟಿಯನ್ನು ಲಗತ್ತಿಸಲಾಗಿದೆ. (ಅನುಬಂಧ-ಆ)

ಇ) ಷರತ್ತನ್ನು ಉಲ್ಲಂಘಿಸಿದ 5 ಪ್ರಕರಣಗಳಲ್ಲಿ ಲೀಸ್‌ಗಳನ್ನು ರದ್ದುಗೊಳಿಸಲಾಗಿದೆ.

CURRENT LEASES IN BANGALORE NORTH DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1 | 79 | M/S Mandial Granites | Granted | 1-10 | 44 |
| 2. | 154 | B.R.S.Kumar | Granted | 2-00 | 12 |
| 3. | 155 | B.R.S.Kumar | Granted | 1-15 | 12 |
| 4. | 178 | B.R.S.Kumar | Granted | 1-15 | 12 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Halusabele Magadi | Multicolour | 06.06.97 | 981.134 | 9,81,134 |
| Udukunte Magadi | Pink Phorphery | 18.01.98 | - | - |
| Udukunte Magadi | Pink Phorphery | 18.01.98 | 534.841 | 5,34,841 |
| Udukunte Magadi | Pink Phorphery | 23.04.98 | 440.095 | 4,40095 |

CURRENT LEASES IN BANGALORE SOUTH DISTRICT

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 65 | D.Venkataramana Swamy | Granted | 2-00 | 636 |
| 2. | 66 | S.N.Manjunath | Pvt. | 2-00 | 53 |
| 3. | 67 | S.N.Manjunath | Pvt. | 4-00 | 64 |
| 4. | 68 | S.N.Manjunath | Pvt. | 3-00 | 65 |
| 5. | 83 | Alan Rosquino | Pvt. | 1-14 | 677/5 |
| 6. | 86 | H.K.Sathya Murhty | Pvt. | 2-00 | 143 |
| 7. | 87 | H.K.Shthya Murthy | Granted | 2-00 | 143 |
| 8. | 88 | H.K.Sathya Murthy | Granted | 2-00 | 145 |
| 9. | 89 | H.K.Sathya Murthy | Pvt | 2-00 | 144 |
| 10. | 94 | M/s.Henrox India Pvt. Ltd., | Pvt. | 3-38 | 53/2 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Kanakapura Kanakapura | Multicolour | 30.04.97 | 2655.536 | 26,55.536 |
| Salabanni Kanakapura | Multicolour | 30.04.97 | 124.832 | 1,24.832 |
| Salabanni Kanakapura | Multicolour | 30.04.97 | 821.825 | 8,21,825 |
| Salabanni Kanakapura | Multicolour | 30.04.97 | - | - |
| Kanakapura Kanakapura | Multicolour | 16.06.97 | 877.483 | 8,77.483 |
| Nidgal Kanakapura | Multicolour | 23.06.97 | 42.680 | 42.680 |
| Nidgal Kanakapura | Multicolour | 23.06.97 | 30.975 | 30,975 |
| Nidgal Kanakapura | Multicolour | 23.06.97 | 127.850 | 1,27.850 |
| Nidgal Kanakapura | Multicolour | 23.06.97 | 68.160 | 68.160 |
| Yedamaranahalli Kanakapura | Multicolour | 27.06.97 | - | - |

| | | | | | |
|---|---|---|---|---|---|
| 11. | 97 | A.Narayana | Pvt | 2-00 | 163 |
| 12. | 99 | V.Lakshmipathy | Pvt. | 3-00 | 181 |
| 13. | 119 | T.S.Prabhakar | Pvt. | 2-00 | 35 |
| 14. | 120 (TCA) | M/S Pallava Granites Ind. | Govt. | 17-24 | 695 |
| 15. | 128 | Smr. Geetha Dharani | Govt. Kharab | 5-00 | 154 |
| 16. | 130 | Sri. Srinivas & Company | Govt. | 8-00 | 126 P |
| 17. | 132 | P.M.Raghavendra | Govt. Kharab | 2-00 | 201 |
| 18. | 147 | S.Narayana Reddy | Pvt. | 2-00 | 47/1,47/5 |
| 19. | 145 | M/s.Sri Srinivasa & Co | Govt. | 6-20 | 75 |
| 20. | 150 | Kanchi Bovi | Pvt. | 2-00 | 162(35) |
| 21. | 157 | Nirmal Singhanna (City Rocks) | Pvt. | 2-20 | 259 |
| 22. | 162 | M/s.Henrox(India) | Pvt. (Inam) | 20-00 | 710,711, 712 |
| 23. | 176 | T.N.Meena | Granted | 4-00 | 421 P |

| | | | | |
|---|---|---|---|---|
| Chikkoppa Kanakapura | Multicolour | 05.07.97 | - | - |
| Kebbihalli Kanakapura | Multicolour | 07.07.97 | 920.429 | 9,20.429 |
| Chikkoppa Kanakapura | Multicolour | 16.08.97 | 183.858 | 1,83,858 |
| Maralabekuppe Kanakapura | Multicolour | 21.08.97 | 12.708 | 12,708 |
| Shivanahalli Kanakapura | Multicolour | 17.09.97 | 123.681 | 1,23.681 |
| Thattekere Kanakapura | Pink | 03.10.97 | 837.981 | 8,37.981 |
| Seegekate Kanakapura | Multicolour | 16.10.97 | - | - |
| Hosadurga Kanakapura | Multicolour | 29.12.97 | 89.737 | 89,737 |
| Kolagendana halli Kanakapura | Black | 26.12.97 | 15.883 | 15.883 |
| Chikkoppa Kanakapura | Multicolour | 31.12.97 | 478.755 | 4,78,755 |
| Hukunda Kanakapura | Multicolour | 20.01.98 | 104.726 | 1,04,726 |
| Maralebekuppe Kanakapura | Multicolour | 11.02.98 | - | - |
| Maralebekuppe Kanakapura | Multicolour | 07.04.98 | 674.757 | 6,74,757 |

| | | | | | |
|---|---|---|---|---|---|
| 24. | 181 | B.C.Mariyappa | Granted | 2-07 | 110 |
| 25. | 191 | C.Ramaiah | Granted | 1-26 | 114 |
| 26. | 192 | M/s Muddeereswara Mining Industries | Private | 2-20 | 91 |
| 27. | 200 | Syed Zameer Ahmed | Pvt | 2-00 | 57/26 |
| 28. | 201 | Shaik Ahmed | Pvt. | 2-00 | 47/8 |
| 29. | 204 | M/s.Gemini Exports | Granted | 9-20 | 289/287 |
| 30. | 205 | Smt.Vijayanath | Granted | 1-26 | 112 |
| 31. | 210 | Smt.Sujatha Nagaraj | Govt. | 4-00 | 21 |
| 32 | 212 | M/s. Jeevapriya Exports | Govt. | 3-00 | 21 |
| 33. | 221 | S.Harish | Govt. | 4-00 | 154 |
| 34. | 227 | L.Babukrishna Prasad | Granted | 6-14 | 691 |
| 35. | 228 | B.C.Mariyappa | Granted | 2-00 | 297 |
| 36. | 229 | T.N.Meena | Granted | 7-20 | 421 |

| | | | | |
|---|---|---|---|---|
| Byalalu Kanakapura | Multicolour | 24.04.98 | - | - |
| Ganganahalli Kanakapura | Multicolour | 19.06.98 | - | - |
| Kuthagalli Kanakapura | Multicolour | 22.06.98 | 928.280 | 9,28.280 |
| Hosadurga Kanakapura | Multicolour | 07.08.98 | - | - |
| Hosadurga Kanakapura | Multicolour | 10.08.98 | - | - |
| Kunoor Kanakapura | Multicolour | 18.08.98 | 1003.282 | 1,00,328 |
| Kebbehalli Kanakapura | Multicolour | 21.08.98 | 482.136 | 4,82.136 |
| Kuthagalli Kanakapura | Multicolour | 19.09.98 | - | - |
| Kuthagalli Kanakapura | Multicolour | 19.09.98 | - | - |
| Shivanahalli Kanakapura | Multicolour | 20.10.98 | - | - |
| M.M.Kuppe Kanakapura | Multicolour | 10.12.98 | 71.505 | 71,505 |
| Horalagalli Kanakapura | Multicolour | 23.12.98 | - | - |
| M.M.Kuppe Kanakapura | Multicolour | 06.01.99 | 72.028 | 72.028 |

| | | | | | |
|---|---|---|---|---|---|
| 37. | 233 | Valasalegowda | Pvt. | 2-00 | 76 |
| 38. | 234 | D.Venkataramana Swamy | Pvt. | 2-00 | 636 |
| 39. | 235 | D.Kantha | Pvt. | 4-00 | 371 |
| 40. | 237 | Smt.Muddalakshamma W/o Govindaraj | Pvt. | 2-00 | 636 |
| 41 | 238 | Puttaraju | Pvt. | 2-00 | 636 |
| 42. | 242 | K.C.Ramamurthy | Pvt. | 4-00 | 42 |
| 43. | 245 | M/s.United Exports | Govt. | 1-00 | 572 |
| 44. | 246 | M/s.Akshay Exports | Govt. | 4-00 | 572 |
| 45. | 247 | T.Prasanna Gowda | Pvt. | 4-00 | 368&369 |
| 46. | 251 | M/s.Sabari Granites | Govt. | 6-00 | 21 |
| 47. | 253 | Smt.Sunitha Keerthi | Govt. | 3-00 | 37 |
| 48. | 258 | M/s.Shantha Exports | Gomal | 10-00 | 67 |

| | | | | |
|---|---|---|---|---|
| M.M.Kuppe Kanakapura | Multicolour | 17.03.99 | 27.049 | 27.049 |
| Kasaba Kanakapura Kanakapura | Multicolour | 10.05.99 | 2229.770 | 22,29,770 |
| Yedamaranahalli Kanakapura | Multicolour | 10.05.99 | 52.08.588 | 52,08,588 |
| Kasaba Kanakapura Kanakapura | Multicolour | 13.05.99 | 303.445 | 3,03,445 |
| Kasaba Kanakapura Kanakapura | Multicolour | 13.05.99 | - | - |
| Nidgal Kanakapura | Multicolour | 20.05.99 | 452.056 | 4,52,056 |
| Maralebekuppe Kanakapura | Multicolour | 31.05.99 | - | - |
| Maralebekuppe Kanakapura | Multicolour | 31.05.99 | - | - |
| Yedamaranahalli Kanakapura | Multicolour | 18.06.99 | - | - |
| Kuthagalli Kanakapura | Multicolour | 29.07.99 | 13.488 | 113.488 |
| Kunoor Kanakapura | Multicolour | 12.8.99 | 222.535 | 2,22,535 |
| Kebbehalli Kanakapura | Multicolour | 1.9.99 | - | - |

| | | | | | |
|---|---|---|---|---|---|
| 49. | 259 | N.Mohan | Gomal | 1-00 | 636 |
| 50. | 260 | N.Mohan | Gomal | 0-30 | 84 |
| 51. | 261 | K.Chandrashekar | Gomal | 2-00 | 84 |
| 52. | 262 | K.Chandrashekar | Gomal | 3-30 | 636 |
| 53. | 264 | S.M.Narayanamurthy | Govt. | 4-32 | 154 |
| 54. | 265 | Renu Bangaru | Patta | 3-15 | 202/2 |
| 55. | 267 | M/s.Aanor Granites | Pvt. | 2-00 | 234 |
| 56. | 269 | M/s.Ranga SC Society | Govt. | 27-00 | 48 |
| 57. | 270 | D.Kantha | Gomal | 2-00 | 42 |
| 58. | 271 | Smt.Gowramma | Govt. | 1-00 | 154 |
| 59. | 272 | Siddappa | Govt. | 2-00 | 154/402 |
| 60. | 273 | Shivamadhu | Govt. | 3-00 | 154/402 |
| 61. | 276 | Sridhar Reddy | Gomal | 6-00 | 70 |

| | | | | |
|---|---|---|---|---|
| Kanakapura Kanakapura | Multicolour | 2.9.99 | - | - |
| Thamasandra Kanakapura | Multicolour | 2.9.99 | - | - |
| Thamasandra Kanakapura | Multicolour | 2.9.99 | - | - |
| Kasaba Kanakapura | Multicolour | 2.9.99 | - | - |
| Shivanahalli Kanakapura | Multicolour | 10.9.99 | 176.996 | 1,76,996 |
| Doddakoppa Kanakapura | Multicolour | 10.9.99 | 152.726 | 1,52,726 |
| Kebbehalli Kanakapura | Multicolour | 20.9.99 | 218.821 | 2,18,821 |
| Hosadurga Kanakapura | Multicolour | 27.9.99 | 84.176 | 84,176 |
| Nidgal Kanakapura | Multicolour | 29.9.99 | - | - |
| Shivanahalli Kanakapura | Multicolour | 29.9.99 | - | - |
| Shivanahalli Kanakapura | Multicolour | 29.9.99 | - | - |
| Shivanahalli Kanakapura | Multicolour | 29.9.99 | - | - |
| Puradadoddi Kanakapura | Multicolour | 29.9.99 | - | - |

| | | | | | |
|---|---|---|---|---|---|
| 62. | 277 | R.Ananthapadmanabha | Gomal | 6-00 | 70 |
| 63. | 278 | Y.Doraiswamy Raju | Gomal | 7-00 | 70 |
| 64. | 279 | Amanulla Shariff | Granted | 2-00 | 51 |
| 65. | 280 | Amanulla Shariff | Granted | 1-00 | 51 |
| 66. | 281 | M/s.R.C.India | Gomal | 12-00 | 53 |
| 67. | 282 | M/s.Prabhat Granites | Gomal | 4-00 | 53 |
| 68. | 285 | N.B.Nirwani | Gomal | 4-00 | 70 |
| 69. | 286 | R.P.Pavate | Gomal | 4-00 | 70 |
| 70. | 287 | P.Girish | Gomal | 6-16 | 70 |
| 71. | 289 | M/s. Muddeereswara Mining Industries | Gomal | 35-00 | 48 |
| 72 | 290 | M.Babamma | Govt. | 10-00 | 154 |
| 73. | 291 | M/s.Moon Rock Ages(P)Ltd. | Govt. | 6-30 | 154 |
| 74. | 292 | A.C.Shivalingegowda | Pvt. | 2-00 | 636 |

| | | | | |
|---|---|---|---|---|
| Puradadoddi Kanakapura | Multicolour | 29.9.99 | - | - |
| Puradadoddi Kanakapura | Multicolour | 29.9.99 | - | - |
| Nidgal Kanakapura | Multicolour | 7.10.99 | - | - |
| Nidagal Kanakapura | Multicolour | 7.10.99 | - | - |
| Achalu Kanakapura | Multicolour | 12.10.99 | - | - |
| Achalu Kanakapura | Multicolour | 12.10.99 | - | - |
| Puradadoddi Kanakapura | Multicolour | 14.10.99 | - | - |
| Puradadoddi Kanakapura | Multicolour | 14.10.99 | - | - |
| Puradadoddi Kanakapura | Multicolour | 14.10.99 | - | - |
| Hosadurga Kanakapura | Multicolour | 16.10.99 | - | - |
| Shivanahalli Kanakapura | Multicolour | 16.12.99 | - | - |
| Shivanahalli Kanakapura | Multicolour | 29.12.99 | 268.388 | 2,68,388 |
| Kanakapura Kanakapura | Multicolour | 12.1.2000 | 833.654 | 8,33,654 |

| | | | | | |
|---|---|---|---|---|---|
| 75. | 293 | M/s.Muddeereswara Mining Industries | Govt. | 4-00 | 67 |
| 76. | 294 | M/s.Muddeereswara Mining Industries | Govt. | 2-20 | 67 |
| 77. | 295 | M/s.C.V.S.Granites | Govt. | 4-30 | 35 |
| 78. | 296 | M/s.C.V.S.Granites | Govt. | 5-24 | 35 |
| 79. | 297 | M/s.C.V.S.Granites | Govt. | 4-20 | 35 |
| 80. | 298 | M/s.Seven Hills Ex-Import Corporation | Pvt. | 5-00 | 63 |
| 81. | 299 | D.Nagaraj | Pvt. | 1-00 | 61 |
| 82. | 300 | L.C.Ramu | Govt. | 1-15 | 14 |
| 83. | 303 | Smt.Indramma | Pvt. | 2-10 | 283/5 |

| | | | | |
|---|---|---|---|---|
| Kebbehalli Kanakapura | Multicolour | 24.1.2000 | - | - |
| Kebbehalli Kanakapura | Multicolour | 24.1.2000 | - | - |
| Chikkoppa Kanakapura | Multicolour | 24.1.2000 | 181.665 | 1,81,665 |
| Chikkoppa Kanakapura | Multicolour | 24.1.2000 | 42.545 | 42,545 |
| Chikkoppa Kanakapura | Multicolour | 24.1.2000 | 41.926 | 41,926 |
| Doddakoppa Kanakapura | Multicolour | 24.1.2000 | - | - |
| Narayanapura Kanakapura | Multicolour | 27.1.2000 | - | - |
| Manya devangundi Kanakapura | Multicolour | 28.1.2000 | - | - |
| Nallahalli Kanakapura | Multicolour | 10.3.2000 | - | - |

CURRENT LEASES IN KOLAR DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 93 (TCA) | Parasmalji Sankala | Govt. | 4-00 | 67 |
| 2. | 96 | M/s.Mohan Arts and Granite Industries | Pvt. | 1-00 | 32 |
| 3. | 136 (TCA) | K.Satyanarayana | Govt. | 3-20 | 4 |
| 4. | 138 | M/s.Hemavathy Granites | Govt. | 7-20 | 276 |
| 5. | 143 | R.A.Rasheed Khan | Govt. | 2-00 | 356 |
| 6. | 153 | M/s.Indian Rocks | Govt. | 10-00 | 51 |
| 7. | 207 | Shaik Fakruddin | Granted | 4-26 | 113 |
| 8. | 230 | M/s.Faiza Exports | Granted | 2-00 | 208 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Benaghatta Malur | Black | 25.06.97 | 105.663 | 1,59,499 |
| Mooganahalli Bangarpet | Black | 28.06.97 | 80.797 | 1,28,842 |
| Vabasandra Anupanahalli Gudibande | Pink | 03.11.97 | 14.365 | 14,400<br>28,366 |
| Yellodu Gudibande | Pink | 29.11.97 | - | - |
| Kothur Gowribidanur | Grey | 22.12.97 | 170.884 | 1,90,820 |
| Egganahalli Gudibande | Pink | 13.01.98 | 18.996 | 19,250 |
| Vabasandra Gudibande | Multicolour | 03.09.98 | 86.753 | 52,110 |
| Kothapet Srinivasapura | Grey | 07.01.99 | - | - |

CURRENT LEASES IN MYSORE DISTRICT

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 100 (TCA) | M/s. Varienty Granites | Govt. | 6-00 | 258&187 |
| 2. | 101 | Channabasavaiah | Pvt. | 1-00 | 2/28 |
| 3. | 124 | V.Gopalakrishna Shetty | Pvt. | 1-00 | 371 |
| 4. | 163 | M.Venkatesh | Granted | 2-00 | 56 |
| 5. | 164 | M.Venkatesh | Granted | 2-00 | 56 |
| 6. | 173 | M.Venkatesh | Patta | 0-30 | 21 |
| 7. | 195 | N.Chandrashekaran | Patta | 3-00 | 64 |
| 8. | 222 | M.Venkatesh | Granted | 1-10 | 9 |
| 9. | 223 | C.Nalini | Govt. | 2-00 | 9 |
| 10. | 248 | M/s.Mysore Minerals Ltd., | Govt. | 12-30 | 146 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Mullur Veeradevanapura Nanjangud | Black | 07.07.97 | 64.802 | 129604 |
| Kallahalli Nanjangud | Black | 10.7.97 | 78.622 | 157244 |
| Alaganchi Nanjangud | Black | 06.09.97 | - | - |
| Hirege Hunsur | Black | 17.02.98 | 37.151 | 74302 |
| Hirege Hunsur | Black | 17.02.98 | 231.387 | 462774 |
| Utterahalli Periyapatna | Black | 01.04.98 | - | - |
| Bettadur Hunsur | Multicolour | 26.06.98 | 36.611 | 36611 |
| Utenahalli Periyapatna | Black | 3.11.98 | 225.851 | 4,51,702 |
| Utenahalli Periyapatna | Black | 3.11.98 | - | - |
| Bettadathunga Periyapatna | Yellow | 7.7.99 | - | - |

CURRENT LEASES IN CHAMARAJANAGARA DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 76 | Shaobuddin Khan | Pvt. | 2-00 | 134/3,4, 8,10,11 |
| 2. | 80 | K.M.Lakshman | Pvt. | 3-00 | 104/1,104/2 |
| 3. | 84 | M.Nanjundaswamy | Pvt. | 2-05 | 809 |
| 4. | 92 | Syed Doddar Rizwan Ahamed | Pvt. | 1-00 | 241 |
| 5. | 111 | Nanjundaswamy | Pvt. | 1-02 | 302 |
| 6. | 123 | B.O.R.Ranga Rao | Pvt. | 2-17 | 79 |
| 7. | 125 | M/s.Indian Rocks | Govt. | 10-00 | 225/39 |
| 8. | 131 | M/s.Indian Rocks | Govt. | 11-00 | 225/39 |
| 9. | 140 | M/s.Mysore Minerals Ltd., | Govt. | 15-00 | 112/117 |
| 10. | 148 | Mahadevamma | Granted | 1-00 | 20 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Nagenahalli Periyapatna | Yellow Pink | 20.05.97 | - | - |
| J.G.Pura Chamarajanagar | Black | 06.06.97 | - | - |
| Terakanambi Gundlupet | Black | 23.06.97 | 379.415 | 758830 |
| Kaggalipura Chamarajanagar | Black | 24.06.97 | 77.455 | 154910 |
| Veerapura Chamarajanagar | Black | 31.07.97 | 92.602 | 185204 |
| Nanjadevapura Chamarajanagar | Black | 06.09.97 | 86.333 | 172666 |
| Kiraganur Kadahalli Chamarajanaga | Black | 06.09.97 | 1039.259 | 2078518 |
| Kiraganur Kadahalli Chamarajanagar | Black | 03.10.97 | 604.586 | 1209172 |
| Yadapura Uttaralli | Black | 19.03.92 | 40.130 600<br>24.968 2000 | 24078<br>49936 |
| Srirangapatna Chamarajanagar | Black | 31.12.97 | 206.605 | 413210 |

| | | | | | |
|---|---|---|---|---|---|
| 11. | 220 | M/s.Mysore Minerals Ltd., | Granted | 1-10 | 516 |
| 12. | 226 | M/s.Mysore Minerals Ltd., | Govt. | 26-00 | 235 |
| 13. | 239 | M/s.Hind Nippon Rural Industries | Govt. | 2-10 | 640 |
| 14. | 240 | M/s.Hind Nippon Rural Industries | Govt. | 2-00 | 641&642 |
| 15. | 249 | M/s.Mysore Minerals Ltd., | Govt. | 8-00 | 29 |
| 16. | 255 | M/s.Prasad Granites | Govt. | 6-00 | 248&6 |
| 17. | 256 | M/s.Bharat Granites(P) Ltd., | Govt. | 2-00 | 248 |
| 18. | 257 | M/s.Bharat Granites (P) Ltd., | Govt. | 3-30 | 6 |
| 19. | 268 | Manchegowda | Govt. | 2-00 | 184 |
| 20. | 288 | M/s.Oriental Select Granite | Govt. | 0-34 | 184 |
| 21. | 301 | G.M.Ziulla Huq | Govt. | 10-00 | 184 |

| | | | | |
|---|---|---|---|---|
| Kudlur Chamarajanagar | Black | 3.11.98 | 303.920 | 607840 |
| Punganur Chamarajanagar | Black | 3.6.95 | 2406.080 | 4812160 |
| Gumballi Chamarajanagar | Black | 14.5.99 | 252.032 | 504064 |
| Gumballi Chamarajanagar | Black | 14.5.99 | 702.465 | 1404930 |
| Mallanapura Chamarajanagar | Black | 21.8.95 & 12.4.95 | - | - |
| Melamala K.Devarahalli CR.Nagar | Black | 21.8.99 | - | - |
| Melamala CR.Nagar | Black | 21.8.99 | 65.882 | 131764 |
| K.Devarahalli CR.Nagar | Black | 21.8.99 | - | - |
| J.G.Pura Chamarajanagar | Black | 22.9.99 | 193.887 | 387774 |
| J.G.Pura Chamarajanagar | Black | 16.10.99 | - | - |
| J.G.Pura C.R.Nagar | Black | 2.2.2000 | - | - |

CURRENT LEASES IN TUMKUR DISTRICT

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 75 | M.D.Naidu | Govt. | 6-00 | 42 |
| 2. | 77 | M/s.Variety Granite Exporters | Govt. | 5-00 | 42 |
| 3. | 78 | Smt.G.V.Annapurna | Pvt. | 2-00 | 78 |
| 4. | 85 | BLN Builders(P)Ltd., | Govt. | 2-10 | 15 |
| 5. | 90 | P.Venugopal Alias P.Mani | Pvt. | 0-20 | 68 |
| 6. | 95 | K.B.Leelambika | Govt. | 5-00 | 22 |
| 7. | 116 | M/s.Greamer Stones(P)Ltd., | Pvt. | 1-00 | 320 |
| 8. | 141 | M/s.Tavarekere (SC) Stone Cutters Co-op.Socty. | Govt. | 3-00 | 50 |
| 9. | 187 | Smt.C.V.Pushpalatha | Govt. | 3-30 | 42 |
| 10. | 196 | M/s.Karnataka Rare Earth | Govt. | 2-20 | 82 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Danapura Tumkur | Pink Phorphery | 15.5.97 | 146.460 | 2,31,784.00 |
| Nandihalli Tumkur | Pink Phorphery | 22.5.97 | 944.318 | 9,78,200.00 |
| Tavarekere Kunigal | Multicolour | 23.5.97 | 647.362 | 6,58,567.00 |
| Naganahalli Kunival | Multicolour | 23.6.97 | Cancelled | |
| Aregujjahalli Tumkur | Pink Phorphery | 23.6.97 | 120.269 | 1,26,650.00 |
| Hodekal Tumkur | Pink | 27.6.97 | 3787.637 | 35,90,250.00 |
| Sugar Tiptur | Black | 13.8.97 | 57.408 | 1,14,460.00 |
| Holakallu Sira | Grey | 11.12.97 | 69.591 | 1,10,305.00 |
| Danapura Tumkur | Pink | 14.5.98 | 72.305 | 73,000.00 |
| Aramane, Honamachana halli Kunigal | Pink | 1.7.98 | - | - |

| | | | | | |
|---|---|---|---|---|---|
| 11. | 197 | M/s.Karnataka Rare Earth | Govt. | 0-20 | 82 |
| 12. | 183 | M/s.M.Halli Society | Govt. | 4-00 | 50 |
| 13. | 213 | R.G.Shantharaju | Govt. | 3-20 | 42 |
| 14. | 232 | M/s.Ruby Granites | Govt. | 2-20 | 15 |

| | | | | |
|---|---|---|---|---|
| Aramane, Honamachana halli Kunigal | Pink | 1.7.98 | - | - |
| Holakallu Sira | Grey | 25.4.98 | - | - |
| Danapura Tumkur | Pink | 9.10.98 | - | - |
| Nagenahalli Kunigal | Multicolour | 8.2.99 | - | 5,346.00 |

CURRENT LEASES IN DAKSHINA KANNADA DISTRICT

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 170 | Sanjeeva Hengsu | Patta | 0-61 cents | 5/5D |
| 2. | 171 | Rajeeva Bhandary | Patta | 0.47 cents | 13/6A |
| 3. | 172 | P.Usman | Patta | 0.50 cents | 120/1 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Kilingaru Managalore | Black | 17.3.98 | 90.470 | 1,36,705-00 |
| Gurupura Mangalore | Black | 17.3.98 | 52.567 | 78,850-00 |
| Mogaru Belthangadi | Multicolour | 31.3.98 | 15.453 | 9,272-00 |

CURRENT LEASES IN UDUPI DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 103 | M.Ashoka Shetty | Pvt. | 1-73 cents | 8/1A3 |
| 2. | 104 | M.Ashoka Shetty | Pvt. | 0-75 cents | 18/2A/2A |
| 3. | 105 | M.Ashoka Shetty | Pvt. | 1-20 | 18/2A1 |
| 4. | 106 | M.Ashoka Shetty | Pvt. | 1-00 | 7B |
| 5. | 109 | M.Ashoka Shetty | Pvt. | 4-25 | 1A3-1, 1A3-G etc. |
| 6. | 110 | M.Ashoka Shetty | Pvt. | 0-78 cents | 117-1A |
| 7. | 149 | Suresh K.Maroli | Pvt. | 1-36 cents | 49/8P etc. |
| 8. | 186 | M/s.Stona Granites Pvt. Ltd., | Pvt. | 0.80 cents | 24/2 |
| 9. | 284 | B.Abdul Rahiman | Patta | 0-26 | 126/3 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Shirva Udupi | Black | 24.7.97 | 22.508 | 59,527-00 |
| Shirva Udupi | Black | 24.7.97 | 71.402 | 1,07,103-00 |
| Shirva Udupi | Black | 24.7.97 | 34.099 | 51,148-50 |
| Shirva Udupi | Black | 24.7.97 | 73.579 | 1,10,368-50 |
| Kurkalu Udupi | Black | 30.7.97 | 167.702 | 2,51,553-00 |
| Punyala Udupi | Black | 30.7.97 | 90.708 | 1,36,062-00 |
| Karkala Udupi | Dolorite | 31.12.97 | 175.266 | 2,62,899-00 |
| Kadujje Karkala | Grey | 14.05.98 | 11.846 | 11,846-00 |
| Paladoka Karkala | Black | 14.10.99 | - | - |

CURRENT LEASES IN HASSAN DISTRICT

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1 | 69 | M.C.Rangaswamy | Govt. | 10-00 | 1 |
| 2 | 70 | M.T.Nagaraj | Govt. | 5-00 | 1 |
| 3 | 72 | M.Subramanian | Pvt. | 2-00 | 55/1 |
| 4 | 165 | A.S.Abdul Hafeez Sayed | Pvt. | 2-30 | 326 |
| 5 | 166 | K.S.Papegowda | Granted | 1-00 | 329 |
| 6 | 184 | M.J.Thimmegowda | Govt. | 6-00 | 1 |
| 7 | 185 | Krishnegowda | Govt. | 6-00 | 1 |
| 8 | 214 | Nazir Baig | Patta | 1-18 | 183 |
| 9 | 215 | Nazir Baig | Patta | 1-18 | 183 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Mudaganur, Kawal Arkalgud | Multicolour | 2.5.97 | 5.598 | 72.500 |
| Mudaganur, Kawal Arkalgud | Multicolour | 2.5.97 | 41.670 | 1,10.330 |
| P.Dasapura Chennarayapatna | Multicolour | 12.5.97 | 4.975 | 5.000 |
| Maranli Hassan | Hassan Green | 4.3.98 | 899.000 | 9,04.251 |
| Maranli Hassan | Hassan Green | 7.3.98 | 35.234 | 37.382 |
| Medaganur | Multicolour | 11.5.98 | 86.869 | 96.869 |
| Arkakud Kaval | Multicolour | 11.5.98 | 78.837 | 78.837 |
| Mulavathur Arkalgud | Multicolour | 12.10.98 | Nil | Nil |
| Mulavathur Arkalgud | Multicolour | 12.10.98 | Nil | Nil |

CURRENT LEASES IN BELLARY DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 64 | G.Padma | Pvt. | 1-00 | 79/A |
| 2. | 73 | N.Satyanarayana | Govt. | 2-20 | 56/C |
| 3. | 74 | G.G.Ananda Murthy | Govt. | 1-00 | 79/A |
| 4. | 82 | Shyam Chowdary | Govt. | 0-20 | 79/A |
| 5. | 81 | Shyam Chowdary | Govt. | 3-00 | 86 |
| 6. | 91 | M/s.Snow Foam Industries | Govt. | 1-20 | 86 |
| 7. | 108 | M/s.Balaji Granites | Pvt. | 0-20 | 373 |
| 8. | 112 | G.Shafi Sab | Govt. | 1-00 | 51 |
| 9. | 115 (TCA) | S.M.Jain | Govt. | 22-00 | 9&97 |
| 10. | 117 | M/s.Hind Nippon Rural Inds. | Govt. | 4-00 | 284 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Dammur Bellary | Pink | 30.4.97 | 4.210 | 421 |
| Thimmalapur Hospet | Black | 125.5.97 | - | - |
| Nadavi Siruguppa | Pink | 15.5.97 | - | - |
| Nadavi Siruguppa | Pink | 10.6.97 | - | - |
| Nadavi Sirugappa | Pink | 10.6.97 | 36.519 | 36.519 |
| Nadavi Siruguppa | Pink | 24.6.97 | - | - |
| Manner masalawada Huvinahadagalli | Grey | 29.7.97 | 14.07 | 14.07. |
| Ingalgi Hospet | Black | 31.7.97 | - | - |
| Mallapur Sirugappa | Pink | 8.8.97 | - | - |
| Bailur Bellary | Pink | 13.8.97 | 31.621 | 31.621 |

| | | | | | |
|---|---|---|---|---|---|
| 11. | 118 | R.Shanmukappa | Govt. | 2-00 | 1066 |
| 12. | 133 | Raghavendra Enterprises | Govt. | 7.90 cents | 197 |
| 13. | 142 | M/s.Indian Furniture Works | Govt. | 2-00 | 184 |
| 14. | 194 | Jayanth Giriyolkar | Govt. | 3-00 | 819 |
| 15. | 203 | M/s.H.N.R.I. | Govt. | 7-00 | 82 |
| 16. | 206 | M/s.M.M.Granites | Govt. | 5-00 | 240 |
| 17. | 211 | M/s.K.G.N.Granites | Govt. | 1-00 | 25/A/2B |

| | | | | |
|---|---|---|---|---|
| Daroji Sandur | Black | 14.8.97 | - | - |
| Badanatti Bellary | Grey | 19.5.97 | - | - |
| Udegolari Siruguppa | Pink | 12.12.97 | - | - |
| Tekkalakote Siruguppa | Pink | 24.6398 | - | - |
| Dammur Bellary | Pink | 18.8.98 | - | - |
| Bakkalageri Hospet | Grey | 28.8.98 | - | - |
| Hampapatna H.G.Halli | Black | 19.9.98 | - | - |

CURRENT LEASES IN BAGALKOT DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 107 | Ambu Ramappa Chauvan | Pvt. | 1-00 | 279 |
| 2. | 114 | M/s.Rambarosa Granites | Pvt. | 8-00 | 269 |
| 3. | 121 | Mohan D.Hosamani | Pvt. | 1-00 | 250/1A |
| 4. | 137 | M/s.Mysore Minerals Ltd., | Govt. | 17-00 | 5 |
| 5. | 144 | Durgappa Satyappa Bandi | Govt. | 15-00 | 40 |
| 6. | 146 | Esther 'C' | Pvt. | 5-01 | 250/2C |
| 7. | 151 | Mohan D.Hosamani | Pvt. | 0-20 | 249/1 |
| 8. | 152 | Dilip N.Devigirikar | Pvt. | 1-00 | 94/1A/1 |
| 9. | 156 | Bharat Parasmal Bora | Pvt. | 0-20 | 249/3 |
| 10. | 158 | Hanumappa V.Waddar | Pvt. | 1-00 | 259/3 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Balakundi Hunugund | Pink | 24.07.97 | 1497.445 | 29,94.000 |
| Balakundi Hungund | Pink | 02.08.97 | 208.456 | 4,16,912 |
| Balakundi Hunugund | Pink | 23.08.97 | 406.091 | 8,12,182 |
| Sankalapur Hunugund | Pink | 7.11.97 | 25.545 | 51,090 |
| Guggalamari Hunugund | Pink | 24.12.97 | 484.593 | 9,69,186 |
| Balakundi Hunugund | Pink | 26.12.97 | - | - |
| Balakundi Hunugund | Pink | 5.1.98 | 1316.157 | 26,32,314 |
| Hirekodagalli Hunugund | Pink | 8.1.98 | 909.983 | 18,19,966 |
| Balakundi Hunugund | Pink | 20.1.98 | 386.506 | 7,73,012 |
| Balakundi Hunugund | Pink | 2.2.98 | 364.270 | 7,28,540 |

| | | | | | |
|---|---|---|---|---|---|
| 11. | 174 | Laxmappa L.Rathod | Patta | 2-00 | 272 |
| 12. | 209 | M/s.E.K.Granites | Pvt. | 1-00 | 7/1 |
| 13. | 224 | Y.S.Hoolageri | Pvt. | 2-20 | 2/3B |
| 14. | 225 | H.S.Hoolageri | Pvt. | 2-20 | 13/3C, 13/5 etc. |
| 15. | 266 | M/s.Gem Granites | Govt. | 49-24 | 293 |
| 16. | 274 | H.S.Hoolageri | Pvt. | 2-00 | 101/1 |
| 17. | 275 | D.S.Hoolageri | Pvt. | 3-04 | 100/6 |
| 18. | 302 | M/s.Gomatesh Granites | Pvt. | 19-16 | 2/4B, 7/1A etc. |

| | | | | |
|---|---|---|---|---|
| Balkundi Hunugund | Pink | 1.4.98 | 456.267 | 9,12,534 |
| Gaggalamei Hunugund | pink | 15.9.98 | - | - |
| Hanumanal Hunugund | Pink | 16.11.98 | 390.572 | 7,81,144 |
| Hanumanal Hunugund | Pink | 16.11.98 | 31.728 | 63,456 |
| Balkundi Hunugund | Pink | 17.9.99 | 7863.170 | 1,57,26,340 |
| Herikodagali Hunugund | Pink | 29.9.94 | - | - |
| Herikodagali Hunugund | Pink | 29.9.94 | 175.195 | 350.390 |
| Gudar Hire kodagalli Hunugund | Pink | 3.2.2000 | 48.942 | 97,884 |

CURRENT LEASES IN RAICHUR DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 134 | K.Prakash | Pvt. | 1-02 | 37/1 |
| 2. | 159 | H.Siddaramappa | Pvt. | 1-20 | 402/2 |
| 3. | 177 | Ashok Gowral Patil | Patta | 6-00 | 41/2 |
| 4. | 179 | M/s.Katekattima | Pvt. | 5-00 | 98/2, 98/3 |
| 5. | 219 | B.K.Narendranath Singh | Pvt. | 1-12 | 55/6 |
| 6. | 283 | D.R.Surpur | Patta | 0-24 | 88/2/1 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Myakaladoddi Deodurga | Pink | 29.10.97 | 4.778 | 1,440 |
| Mudgal Lingasugur | Grey | 7.2.98 | 1795.376 | 10,80,538 |
| Makapura Lingasugur | Pink | 7.4.98 | 748.687 | 7,45,731 |
| Killuratti Lingasugur | Grey | 24.4.98 | 9.833 | 5,900 |
| Sananawandi Deodurga | Pink | 15.10.98 | 30.191 | 30,191 |
| Makapur Lingusugur | Pink | | 10.073 | 7,848 |

CURRENT LEASES IN KOPPAL DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1 | 71 | Goural Suresh | Pvt. | 2-00 | 43/2 |
| 2 | 102 | Pramod Kumar | Pvt. | 1-00 | 50/s |
| 3 | 113 | Manohar P Karve | Pvt. | 5-00 | 40/3 |
| 4 | 122 | Dr.Basavaraj | Pvt. | 2-00 | 31/2 |
| 5 | 126 | Gaju M.Bora | Pvt. | 3-39 | 53/D |
| 6 | 127 | Megharaj G.Rajeet | Pvt. | 3-00 | 94 |
| 7 | 129 | Gowtan M.Bora | Pvt. | 2-00 | 44/1 |
| 8 | 135 | Pramodkumar | Pvt. | 1-32 | 345 |
| 9 | 160 | R.L.Rathod | Pvt. | 2-00 | 32/2 |
| 10 | 161 | R.L.Rathod | Pvt. | 1-00 | 122/1 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Goural Yelburga | Grey | 5.5.97 | 1075.318 | 10,75.218 |
| Chandoor Yelburga | Grey | 17.7.97 | 113.954 | 1,13,954 |
| Sebinakatte Kustagi | Pink | 2.8.97 | 161.978 | 15,68,322 |
| Gowral Yelburga | Grey | 4.9.97 | 2514.117 | 25,10,279 |
| Antarthana Kustagi | Pink | 8.9.97 | 648.251 | 12,90,420 |
| Kakkihalli Yelburga | Grey | 16.9.97 | - | - |
| Bandargal Kustagi | Pink | 25.9.97 | 1037.763 | 20,71,165 |
| Kukkanur Yelburga | Grey | 3.11.97 | 1120.670 | 12,20,670 |
| Bandargal Kustagi | Pink | 10.2.98 | 207.571 | 4,09,732 |
| Hollageri Kustagi | Pink | 10.2.98 | 408.159 | 6,65,401 |

| | | | | | |
|---|---|---|---|---|---|
| 11 | 167 | Fakirsab Rajar | Pvt. | 3-00 | 48/8/398 |
| 12 | 168 | Fakirsab Rajar | Pvt. | 3-00 | 48/7/397 |
| 13 | 169 | A.Varadaraj | Pvt. | 1-15 | 10/2 |
| 14 | 175 | M/s.Lazores Mineras | Pvt. | 2-00 | 15 |
| 15 | 180 | Y.V.Satyanarayana | Pvt. | 2-00 | 70/E |
| 16 | 188 | M/s.Kabini Minerals | Pvt. | 7-25 | 129/1A |
| 17 | 189 | M/s.Rex Rocks | Pvt. | 4-00 | 200 |
| 18 | 190 | D.Tataji Rao | Pvt. | 1-00 | 221/A |
| 19 | 193 | Prakash | Pvt. | 2-00 | 60/B |
| 20 | 198 | R.Shivakumar | Pvt. | 1-00 | 191/1 |
| 21 | 199 | Handalappa Basalla Talwar | Pvt. | 1-20 | 79/A |
| 22 | 202 | G.Balasubramanian | Pvt. | 19-32 | 33/2 |
| 23 | 208 | Arvinda Balappa | Pvt. | 3-16 | 374/2/2 |

| | | | | |
|---|---|---|---|---|
| Huligeri Kustagi | Pink | 7.3.98 | 433.159 | 8,65,401 |
| Huligeri Kustagi | Pink | 7.3.98 | - | - |
| Gowral Yelburga | Grey | 16.3.98 | 184.991 | 1,85,579 |
| Advibavi Gangavathi | Pink | 3.4.98 | - | - |
| Kakkihalli Yelburga | Grey | 24.4.98 | 387.043 | 3,87,043 |
| Irkalgudda Koppal | Pink | 14.5.98 | 428.295 | 4,28,295 |
| Kukanur Yelburga | Grey | 18.5.98 | 266.238 | 2,66,238 |
| Mustur Gangavati | Pink | 5.6.98 | 289.489 | 2,89,489 |
| Chennappana halli Yelburga | Grey | 22.6.98 | 415.359 | 4,15,359 |
| Kukanoor Yelburga | Grey | 15.7.98 | 1154.520 | 11,54,520 |
| Kukanoor Yelburga | Grey | 16.7.98 | 915.650 | 9,15,650 |
| Bandargal Kustagi | Pink | 13.8.98 | 1166.172 | 23,12,344 |
| Hulageri Kustagi | Pink | 15.9.98 | - | - |

| | | | | | |
|---|---|---|---|---|---|
| 24 | 216 | M/s. Oriental Select Granites | Patta | 2-12 | 162/A, 162/2B |
| 25 | 217 | M/s. Oriental Select Granites | Patta | 3-00 | 154/A |
| 26 | 231 | Shekarappa B.Nagavalli | Patta | 3-00 | 43/1 |
| 27 | 236 | Goutam Mangilal Bora | Pvt. | 3-00 | 12/3 |
| 28 | 241 | Subhash M.Harihar | Patta | 2-22 | 6/1/2 |
| 29 | 243 | Anilkumar | Pvt. | 1-20 | 44/1,44/ |
| 30 | 244 | G.N.Gurusiddappa | Pvt. | 1-00 | 197/1 |
| 31 | 250 | Vittal Das | Patta | 2-00 | 392 |
| 32 | 252 | Prabhudev | Patta | 1-00 | 25/9/14 |
| 33 | 254 | Smt.Sunitha | Pvt. | 3-00 | 16/1 |
| 34 | 263 | Smt.Basavarajeswari | Pvt. | 2-00 | 31/3 |

| | | | | |
|---|---|---|---|---|
| Kukkanoor Yelburga | Grey | 13.10.98 | 133.999 | 1,33,999 |
| Kukkanoor Yelburga | Grey | 13.10.98 | - | - |
| Gowral Yelburga | Grey | 22.1.99 | - | - |
| Kadur Kustagi | Pink | 11.5.99 | 31.097 | 62,194 |
| Purthageri Kustagi | Pink | 19.5.99 | 1046.414 | 20,92,828 |
| Gowral Yelburga | Grey | 28.5.99 | 71.962 | 71,962 |
| Kukanoor Yelburga | Grey | 28.5.99 | 549.609 | 5,49,609 |
| Hulageri Kustagi | Pink | 24.7.99 | 9.119 | 12,828 |
| Kalamalli Kustagi | Multicolour | 2.8.99 | 41.380 | 41,380 |
| Kyadiguppa Kustagi | Pink | 13.8.99 | 66.887 | 1,33,774 |
| Gowral Yelburga | Grey | 6.9.99 | - | - |

CURRENT LEASES IN CHITRADURGA DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 98 | Yusuff Shariff | Pvt. | 1-00 | 26 |
| 2. | 182 | K.M.Rajashekar Murthy | Govt. | 4-00 | 14 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Kasbalu Hosadurga | Multicolour | 5.7.97 | - | - |
| Mallahanur Molakalmur | Grey | 25.4.98 | 256.124 | 1,53,675 |

CURRENT LEASES IN GULBARGA DISTRICT.

| Sl. No. | QL No. | Name of the lessee | Type of land | Extent in acres | Sy. No. |
|---|---|---|---|---|---|
| 1 | 2 | 3 | 4 | 5 | 6 |
| 1. | 139 | Seetharama Shetty | Pvt. | 1-00 | 71/1 |
| 2. | 218 | Mallikarjuna Ninganagowda Birdar | Pvt. | | 1-00 |

| Village Taluk | Mineral | Date of Sanction | Cubic meter | Amount Rs. |
|---|---|---|---|---|
| 7 | 8 | 9 | 10 | 11 |
| Ganganal Shahapur | Pink | 3.12.97 | 34.371 | 34,845 |
| Ganganal Shahapur | Pink | 14.10.98 | 15.867 | 15,867 |

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 240 ಲೈಸೆನ್ಸ್‌ಗಳನ್ನು ನೀಡಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನಿಮ್ಮ ಸರ್ಕಾರ ಆಡಳಿತಕ್ಕೆ ಬಂದ ನಂತರ ಎಷ್ಟು ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಗ್ರಾನೈಟ್ ತೆಗೆಯಲು ಲೈಸೆನ್ಸ್ ಕೊಟ್ಟಿದ್ದೀರಿ? ಹಿಂದೆ ಕೊಟ್ಟಂಥ ಎಷ್ಟು ಪರ್ಮಿಷನ್‌ಗಳಿಗೆ ಸ್ಟೇ ಕೊಟ್ಟಿದ್ದೀರಿ? ಗಣಿಗಾರಿಕೆ ಮಾಡಬಹುದು ಎಂದು ಶಿಫಾರಸ್ಸು ಮಾಡುವುದಕ್ಕೆ ರೂಲ್-11 ಕಮಿಟಿ ಎಂದು ಇದೆ. ಈ ರೂಲ್-11 ಕಮಿಟಿಯೊಳಗೆ ತಾವು ಅಧಿಕಾರಕ್ಕೆ ಬಂದನಂತರ ಯಾವ ಯಾವ ರೀತಿಯಲ್ಲಿ ಬದಲಾವಣೆ ಮಾಡಿದ್ದೀರಿ? ರೂಲ್-11 ಕಮಿಟಿಯ ಅಧಿಕಾರವನ್ನು ಏನಾದರೂ ಬದಲಾವಣೆ ಮಾಡಲಾಗಿದೆಯೇ? ಹೇಗೆ? ಈ ವಿವರಗಳನ್ನು ತಿಳಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಕೋರುತ್ತಿದ್ದೇನೆ.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರೂಲ್-11 ಕಮಿಟಿಯು ಒಂದು ಬಾರಿ ಮಾತ್ರ ಮೀಟಿಂಗ್ ನಡೆಸಿದೆ. ಆ ಮೀಟಿಂಗ್‌ನಲ್ಲಿ ಖಾಸಗಿ ಜಮೀನು ಅಂದರೆ ಪಟ್ಟಾ ಲ್ಯಾಂಡ್ಸ್‌ನ್ನು ಮಾತ್ರ ಮಂಜೂರು ಮಾಡಬೇಕೆನ್ನುವ ಸೂಚನೆಯನ್ನು ಕೊಡಲಾಗಿದೆ. ಅಷ್ಟು ಬಿಟ್ಟರೆ ಬೇರೆ ಯಾವ ಸರ್ಕಾರಿ ಜಮೀನನ್ನು ಕೊಡಬಾರದು ಎನ್ನುವ ತೀರ್ಮಾನವನ್ನು ಮಾಡಲಾಗಿದೆ. ಹಿಂದೆ ಹೊಸ ಲೀಸ್‌ಗೆ ಕೊಡಬೇಕಾದರೆ ರೆವಿನ್ಯೂ ಇಲಾಖೆ ಮತ್ತು ಗಣಿ ಇಲಾಖೆ ಜಂಟಿಯಾಗಿ ಸ್ಥಳ ತನಿಖಾ ವರದಿ ಕೊಡಬೇಕೆಂದು ಇತ್ತು. ಅದಕ್ಕೆ ಬದಲಾಗಿ ಈಗ ಕಂದಾಯ ಮತ್ತು ಗಣಿ ಇಲಾಖೆ ಜೊತೆಗೆ ಅರಣ್ಯ ಇಲಾಖೆಯವರು ಸೇರಿದಂತೆ 3 ಇಲಾಖೆಯವರು ಜಂಟಿಯಾಗಿ ಸ್ಥಳ ತನಿಖೆ ಮಾಡಿ ವರದಿ ಕೊಟ್ಟನಂತರ ಈ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡಬೇಕೆಂದು ಹೊಸ ಕಾನೂನು ಬಂದಿದ್ದರಿಂದ, ಕೆಲವನ್ನೆಲ್ಲ ನಾವು ತಡೆಹಿಡಿದಿದ್ದೇವೆ. ಮತ್ತು ಈ ಹಿಂದೆ ಸುಮಾರು 54 ಲೈಸನ್ಸ್‌ಗಳನ್ನು ಕೊಟ್ಟಿರುವುದನ್ನು ಸಹ ಸಧ್ಯಕ್ಕೆ ತಡೆಹಿಡಿದಿದ್ದೇವೆ. ಹಿಂದೆ ಕೊಟ್ಟಂಥ ಲೈಸನ್ಸ್ ಲೀಗಾಲಿಟಿ ಬಗ್ಗೆ ಕೆಲವು ದೂರುಗಳು ಬಂದಿದ್ದ ಆಧಾರದ ಮೇಲೆ ಅದನ್ನು ನಾವು ತಡೆಹಿಡಿದಿದ್ದೇವೆ. ಅದಕ್ಕೆ ರಾಜ್ಯ ಸರ್ಕಾರದ ಸಂಪುಟ ಉಪ-ಸಮಿತಿಯನ್ನು ನೇಮಕ ಮಾಡಿದ್ದು ಇದರ ಬಗ್ಗೆ ಪರಿಶೀಲನೆ ಆಗುತ್ತಿದೆ. ಬಹುಶಃ ಇನ್ನು ಒಂದು ತಿಂಗಳಲ್ಲಿ ಸಂಪುಟ ಉಪ-ಸಮಿತಿಯ ವರದಿ ಬರುತ್ತದೆ. ಆ ವರದಿ ಬಂದನಂತರ ಅವುಗಳನ್ನು ನಾವು ಇತ್ಯರ್ಥ ಮಾಡುತ್ತೇವೆ. ಅದರ ಜೊತೆಗೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾನೈಟ್‌ಗೆ ಸಂಬಂಧಪಟ್ಟ ಹಾಗೆ ಹೊಸದು ಮತ್ತು ರಿನ್ಯೂವಲ್ ಈ ಎರಡೂ ಸೇರಿ ಸುಮಾರು 37ಕ್ಕೆ ಮಾತ್ರ ಲೀಸಸ್ ಕೊಟ್ಟಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅಧಿಕಾರ ವಹಿಸಿಕೊಂಡ ಆರಂಭದಲ್ಲಿ ಅಂದರೆ ಡಿಸೆಂಬರ್ 22ರಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಹಿಂದಿನ ಸರ್ಕಾರದವರು ಕೊಟ್ಟಿರುವ 53 ಲೈಸನ್ಸ್‌ಗಳನ್ನು ಪುನರ್ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಅಬಕಾರಿ ಲಾಬಿಗಳಂತೆ ಗ್ರಾನೈಟ್ ಲಾಬಿ ಕೂಡ

ಬಹಳ ದೊಡ್ಡ ಲಾಬಿಯಾಗಿದೆ. ಇದರಲ್ಲಿ ಅನೇಕ ಮಂತ್ರಿಗಳು, ಮಾಜಿ ಮಂತ್ರಿಗಳು ಸೇರಿಕೊಂಡಿದ್ದಾರೆಂದು ಪತ್ರಿಕಾ ಮಾಧ್ಯಮಗಳಲ್ಲಿ ಬರುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

ಅಧ್ಯಕ್ಷರು: ಯಾವುದೋ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಚಾರವನ್ನು ಓದಿದರೆ ಏನು ಪ್ರಯೋಜನ? ಆ ಬಗ್ಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲಿ ನಿಖರವಾಗಿ ಹೇಳಿದ್ದಾರಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, 54 ಲೈಸನ್ಸ್‌ಗಳನ್ನು ತಡೆಹಿಡಿದಿದ್ದೇವೆಂದು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಹೇಳಿರುವುದನ್ನೇ ನಾನು ಹೇಳುತ್ತಿದ್ದೇನೆ. ಅವುಗಳನ್ನು ತಡೆಹಿಡಿಯುವುದಕ್ಕೆ ಕಾರಣಗಳೇನು? ಪತ್ರಿಕೆಗಳಲ್ಲಿ ಬರುತ್ತಿರುವುದನ್ನೆಲ್ಲ ನಾವು ನಂಬಲಿಕ್ಕೆ ಆಗುವುದಿಲ್ಲ. ಈಗ ಹೊಸ ವ್ಯವಹಾರ ಮಾಡಲಿಕ್ಕೆ ಅದನ್ನು ತಡೆಹಿಡಿದಿದ್ದಾರೆಂದು ಪತ್ರಿಕೆಗಳಲ್ಲಿ ಬರುತ್ತಿದೆ. ಅದರ ಬಗ್ಗೆ ನಾನು ಹೇಳುವುದಿಲ್ಲ. ಪತ್ರಿಕೆಗಳಲ್ಲಿ ಈ ರೀತಿ ಬರುತ್ತಿರುವುದು, ಇದು ನಿಜವೇ?

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಆ ರೀತಿಯ ಆರೋಪಗಳೆಲ್ಲ ಸತ್ಯಕ್ಕೆ ದೂರವಾದಂಥ ವಿಚಾರಗಳು. ಚುನಾವಣಾ ಘೋಷಣೆ ಆದಂಥ ಸಂದರ್ಭದಲ್ಲಿ ಆ ಆಯೋಗದವರು ಕೋಡ್ ಆಫ್ ಕಾಂಡಕ್ಟ್ ಹೊರಡಿಸಿದ್ದರು. ಅದರ ಪ್ರಕಾರ ಲೈಸನ್ಸ್ ಆ ಸಂದರ್ಭದಲ್ಲಿ ಕೊಡುವ ಹಾಗಿಲ್ಲ. ಆದರೆ, ಆ ಸಂದರ್ಭದಲ್ಲಿ ಕೆಲವರಿಗೆ ಲೈಸನ್ಸ್‌ನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಆರೋಪಗಳು ಸಾರ್ವಜನಿಕರಿಂದ ಬಂದಿದ್ದರಿಂದ ನಾವು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅದು ಲೀಗಲ್ ಆಗಿ ಇದ್ದರೆ ನಾವು ಅದನ್ನು ಪ್ರಶ್ನೆ ಮಾಡುವುದಿಲ್ಲ. ಇಲ್ಲೀಗಲ್ ಆಗಿದ್ದರೆ ಪರಿಶೀಲನೆ ಮಾಡಿ ಅವುಗಳನ್ನು ರಿಜೆಕ್ಟ್ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದಲೇ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ನೇಮಕ ಮಾಡಲಾಗಿದೆ. ಅದು ಪರಿಶೀಲನೆ ಮಾಡುತ್ತಿದೆ. ಹಾಗೆ ಪರಿಶೀಲನೆ ಮಾಡಿ ಒಂದು ತಿಂಗಳಿನಲ್ಲಿಯೇ ನಾವು ಅವುಗಳನ್ನು ಕ್ಲಿಯರ್ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಗ್ರಾನೈಟ್ ಮತ್ತು ಗಣಿಗಾರಿಕೆಗೆ ವಿಫುಲವಾದ ಅವಕಾಶವಿದೆ. ಇದರಿಂದಾಗಿ ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಹೊಸ ನೀತಿಯನ್ನು ಹೊರಡಿಸಬೇಕಾಗಿದೆ. ಇದರ ಬಗ್ಗೆ ಏನಾದರೂ ಪ್ರಯತ್ನ ನಡೆದಿದೆಯೇ? ಏಕೆಂದರೆ, ಹಿಂದಿನ ಬಹುತೇಕ ಎಲ್ಲಾ ಸರ್ಕಾರಗಳು ಇದರ ಬಗ್ಗೆ ಹೊಸ ನೀತಿಯನ್ನು ಮಾಡುತ್ತೇವೆಂದು ಹೇಳಿಕೊಂಡು ಬಂದರೂ ಕೂಡ ಇವತ್ತಿಗೂ ಯಾವ ಸರ್ಕಾರವೂ ಹೊಸ ನೀತಿಯನ್ನು ಹೊರಡಿಸಲಿಲ್ಲ. ಆದುದರಿಂದ ಇದರ ಬಗ್ಗೆ ನಿಮ್ಮ ಪ್ರಯತ್ನ ಏನು? ಇದರ ಜೊತೆಗೆ ಹಿಂದೆ ಇದಕ್ಕೆ ಪರವಾನಗಿ

ನೀಡುವುದಕ್ಕೆ ಮತ್ತು ಪರವಾನಗಿಯ ಮರುನವೀಕರಣಕ್ಕೆ ಒಂದು ಸಮಿತಿ ಇತ್ತು, ಇದನ್ನು ಹಿಂದಿನವರು ರದ್ದು ಮಾಡಿದ್ದರು, ಈ ಸಮಿತಿಯನ್ನು ಪುನಃ ನೀವೇನಾದರೂ ಮಾಡುತ್ತೀರಾ?

ಶ್ರೀ ವಿ.ಮುನಿಯಪ್ಪ: ಬಹುಶಃ ತಮಗೆಲ್ಲರಿಗೂ ಗೊತ್ತಿರುವಂತೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಗಣಿಗಾರಿಕೆಯ ಬಗ್ಗೆ ಹೊಸನೀತಿಯನ್ನು ಎರಡು ತಿಂಗಳಲ್ಲಿ ತರುತ್ತೇವೆಂದು ಹೇಳಿದ್ದಾರೆ. ಅದರಂತೆ ನಾವು ಖಂಡಿತವಾಗಿ ಹೊಸ ನೀತಿಯನ್ನು ತರುತ್ತೇವೆ, ಈ ಹಿನ್ನೆಲೆಯಲ್ಲಿ ಈಗಾಗಲೇ ಸಂಬಂಧಿಸಿದ ಗಣಿಗಾರಿಕೆಯ ಎಲ್ಲಾ ಅಸೋಸಿಯೇಷನ್‌ನವರನ್ನು ಕರೆದು ಯಾವ ಯಾವ ರೀತಿಯಲ್ಲಿ ಇದನ್ನು ಸುಧಾರಿಸಬೇಕು ಎನ್ನುವ ಎಲ್ಲಾ ವಿಚಾರಗಳನ್ನು ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಹಾಗೂ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲೂ ಚರ್ಚೆ ನಡೆಯುತ್ತಿದೆ. ಹೊಸ ಅರ್ಜಿ ಕೊಡುವ ವಿಚಾರವಾಗಿ ರೂಲ್ 11ರ ಸಮಿತಿಯ ಬಗ್ಗೆ ಕೇಳಿದರು. ಮೊದಲು ಈ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸೆಕ್ರೆಟರಿ ಒನ್ ಅಂಡ್ ಟೂ ಎಂದಿತ್ತು. ಈಗ ಪ್ರಿನ್ಸಿಪಲ್ ಸೆಕ್ರೆಟರಿ, ಸೆಕ್ರೆಟರಿ ಎಂದು ಮಾಡಿಕೊಂಡಿದ್ದಾರೆ. ಸಿ ಅಂಡ್ ಐ-ಗೆ ಬರುವ ಅರೇಳು ಡಿಪಾರ್ಟ್‌ಮೆಂಟ್‌ಗಳಲ್ಲಿ ವರ್ಕ್ ಅಲೋಕೇಷನ್ ಮಾಡಿಕೊಂಡಿದ್ದಾರೆ. ಇದರ ಪ್ರಕಾರ ಸೆಕ್ರೆಟರಿಗೆ ನಮ್ಮ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಜವಾಬ್ದಾರಿ ಬರುತ್ತಿರುವುದರಿಂದ ಅವರೇ ಇದನ್ನು ಹೋಲ್ಡ್ ಮಾಡಬೇಕಾಗುತ್ತದೆ. ಇದರ ಪ್ರಕಾರ ರೂಲ್-11ರ ಸಮಿತಿಯ ಅಧ್ಯಕ್ಷರಾಗಿರಬೇಕು ಎನ್ನುವಂಥ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ತಾತ್ವಿಕವಾದ ಕಾರಣಕ್ಕೆ ರೂಲ್-11ರ ಕಮಿಟಿಯನ್ನು ಬದಲಾವಣೆ ಮಾಡಿದ್ದೇವೆಂದು ಹೇಳಿದರು. ಆದರೆ ನಮಗೆ ತಿಳಿದಿರುವ ಸುದ್ದಿಯ ಪ್ರಕಾರ ಅದಲ್ಲ. ಇದಕ್ಕೆ ರಾಜಕೀಯವೇ ಕಾರಣವೆಂದು ಸಾರ್ವಜನಿಕರು ಹಾಗೂ ಪತ್ರಿಕೆಗಳು ಹೇಳುತ್ತಿವೆ. ದಯವಿಟ್ಟು ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ತಾವೇನು ಈಗ ಅಕ್ರಮ ಗಣಿಗಾರಿಕೆಯ ಬಗ್ಗೆ 54 ಕೇಸ್‌ಗಳನ್ನು ತಡೆಹಿಡಿದಿದ್ದೀರಿ, ಅವುಗಳಲ್ಲಿ ಬಹಳ ಪಾರದರ್ಶಕವಾಗಿ ಕ್ರಮ ತೆಗೆದುಕೊಳ್ಳಿ. ನನ್ನ ಹತ್ತಿರ ಇರುವ ಒಂದು ಕೇಸ್‌ನ ಬಗ್ಗೆ ನಾನಿಲ್ಲಿ ಪ್ರಸ್ತಾಪಿಸುತ್ತೇನೆ, ಕಳೆದ ಸದನದಲ್ಲೂ ಕೂಡ ನಾನು ಈ ಬಗ್ಗೆ ಕೇಳಿದೆ. ಇಳಕಲ್‌ನಲ್ಲಿ ಶ್ರೀ ಪೊನ್ನುಸ್ವಾಮಿ ಎನ್ನುವವರಿಗೆ ಪರವಾನಗಿ ಕೊಟ್ಟು ಇದನ್ನು ಈಗ ತಡೆಹಿಡಿದಿದ್ದಾರೆ. ಇಂಥ ವಿಷಯಗಳಲ್ಲಿ ಅನೇಕ ರೀತಿಯ ಅವ್ಯವಹಾರ ನಡೆದಿದೆಯೆಂದು ಇಳಕಲ್‌ನಲ್ಲಿ, ಪತ್ರಿಕೆಗಳಲ್ಲಿ ಹಾಗೂ ಇಡೀ ರಾಜ್ಯದ ತುಂಬಾ ಮಾತನಾಡುತ್ತಾರೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಇಲ್ಲಿ ತಡೆಹಿಡಿದರುವುದಕ್ಕೆ ಕಾರಣ ಇಲ್ಲಿ ಅವ್ಯವಹಾರ ಆಗುತ್ತಿದೆ ಎಂಬುದೇ ಆಗಿದೆ. ಹೀಗಾಗಿ ತಡೆಹಿಡಿದಿರುವ ಪ್ರಕರಣಗಳ ಬಗ್ಗೆ ಬಹಳ ಪಾರದರ್ಶಕವಾಗಿ ಕ್ರಮ

ತೆಗೆದುಕೊಳ್ಳಬೇಕು. ಈ ರೀತಿ ಮಾಡುವುದಕ್ಕೆ ತಾವು ಸಿದ್ದರಿದ್ದೀರಾ? ಅದೇ ರೀತಿ ಪಶ್ಚಿಮ ಘಟ್ಟದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮಲೆನಾಡು, ಪಶ್ಚಿಮ ಘಟ್ಟದ ಪ್ರದೇಶಗಳಲ್ಲಿ ಈ ಗಣಿಗಾರಿಕೆಗೆ ಅವಕಾಶ ಕೊಡಬಾರದು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಳಿದ್ದರೂ ಅವಕಾಶ ಕೊಡುವುದು, ಸಬ್-ಲೀಸ್‌ಗೆ ಕೊಡುವುದು, ಇಂಥವೆಲ್ಲ ನಡೆಯುತ್ತಿವೆ. ನನ್ನ ಕ್ಷೇತ್ರದಲ್ಲಿ ಬಿಸ್‌ಗೋಡ್ ಎನ್ನುವ ಪ್ರದೇಶದಲ್ಲಿ ಕೇಂದ್ರಸಚಿವರು ಬಂದು ನೋಡಿದರೂ ಕೂಡ ಅಲ್ಲಿ ಸರಿಯಾದಂಥ ಪರಿಹಾರವ ವ್ಯವಸ್ಥೆಯಾಗಿಲ್ಲ. ಹೀಗಾಗಿ ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆಗೆ ಅವಕಾಶ ಕೊಡಬಾರದು, ಅದೇ ರೀತಿಯಲ್ಲಿ ಅಕ್ರಮ ಗಣಿಗಾರಿಕೆಯಾದರೆ ಸರಿಯಾದ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು, ಪುನರ್ ಪರಿಶೀಲನೆ ಮಾಡುವಾಗ ಯಾವುದೇ ರೀತಿಯಲ್ಲಿ ಅವ್ಯವಹಾರ ಆಗದೇ ಪಾರದರ್ಶಕವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡವನಹಳ್ಳಿ: ಮಾನ್ಯ ಅಧ್ಯಕ್ಷರೆ, ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಡಿಲೇ ಬ್ರೇಡ್ಸ್ ಕರೆಪ್‌ಷನ್ ಎಂದು ಹೇಳಿದ್ದರು. ಅದರಂತೆ ನೀವು ಯಾವ ಫೈಲನ್ನು ಹೆಚ್ಚಿನ ದಿವಸ ಇಟ್ಟುಕೊಂಡಿದ್ದೀರಿ ಎಂದರೆ ಅಲ್ಲಿ ಇದಕ್ಕೆ ಅವಕಾಶವಾಗುತ್ತದೆ, ಇದರಿಂದಾಗಿ ಜನರಿಗೆ ತಪ್ಪು ಸಂದೇಶ ಹೋಗುತ್ತದೆ. ಪ್ರತಿ ಸರ್ಕಾರಗಳು ಬದಲಾವಣೆ ಆದಾಗ ಹೊಸ ಹೊಸ ನೀತಿ ರೂಪಿಸುತ್ತೀರಿ, ಈ ರೀತಿ ಮಾಡುವುದರಿಂದ ಲಾಭ ಏನಾದರೂ ಜಾಸ್ತಿ ಆಗುತ್ತದೆಯೇ? ಅಥವಾ ದುಡ್ಡು ಜಾಸ್ತಿ ಬರುತ್ತದೆಯೇ? ಸರ್ಕಾರ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ನೀತಿಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ನಿಮ್ಮ ಗಮನದಲ್ಲಿ ಏನು ಇದೆ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ವಿ.ಮುನಿಯಪ್ಪ: ಅಕ್ರಮ ಗಣಿಗಾರಿಕೆಯ ಬಗ್ಗೆ ಈಗಾಗಲೇ ನಮ್ಮ ಸರ್ಕಾರ ತೀವ್ರವಾದಂಥ ಕ್ರಮಗಳನ್ನು ತೆಗೆದುಕೊಂಡಿದೆ. ಅದರಲ್ಲೂ ವಿಶೇಷವಾಗಿ ಇಳಕಲ್, ಕನಕಪುರ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಾಮರಾಜನಗರ- ಈ ಜಿಲ್ಲೆಗಳಲ್ಲಿ ತನಿಖಾ ಠಾಣೆಗಳನ್ನು ಪ್ರಾರಂಭಿಸಿದ್ದೇವೆ. 1999-2000ನೇ ಸಾಲಿಗೆ ಈ ಠಾಣೆಗಳಿಂದ ಸುಮಾರು 56,33,413-00 ರೂಪಾಯಿಗಳನ್ನು ದಂಡದ ರೂಪದಲ್ಲಿ ಈಗಾಗಲೇ ವಸೂಲು ಮಾಡಿದ್ದೇವೆ. ಹಾಗೂ 1,31,434 ವಾಹನಗಳನ್ನು ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ಮಾಡಿದ್ದೇವೆ. ಇಂತಹ ಕ್ರಮಗಳನ್ನು ತೆಗೆದುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಈ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಇದರ ಜೊತೆಗೆ ಈಗಾಗಲೇ ನಾವೇನು ಪರವಾನಗಿಗಳನ್ನು ತಡೆಹಿಡಿದಿದ್ದೇವೆ, ಇದರಲ್ಲಿ ಪರಿಶೀಲನೆಯ ಕಾರ್ಯ ಬಹಳ ಪಾರದರ್ಶಕವಾಗಿದೆ, ಇದಕ್ಕಾಗಿ ಸಚಿವ ಸಂಪುಟದ ಉಪ-ಸಮಿತಿ ನೇಮಿಸಿದ್ದೇವೆ, ಇದರ ಮುಂದೆ ಪರಿಶೀಲನೆ ಮಾಡುತ್ತಿರುವುದರಿಂದ ನೂರಕ್ಕೆ ನೂರರಷ್ಟು ಪಾರದರ್ಶಕವಾಗಿ ಇರುತ್ತದೆ ಎನ್ನುವ ಆಶ್ವಾಸನೆಯನ್ನು ನಾನು

ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಒಂದು ಪ್ರಶ್ನೆ ಏನು ಕೇಳುತ್ತೇನೆಂದರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಅದೇನೆಂದರೆ, ಈ ಗ್ರಾನೈಟ್ ವ್ಯವಹಾರದಲ್ಲಿ ಮಂತ್ರಿಗಳು, ಮಾಜಿಮಂತ್ರಿಗಳು, ಹಾಲಿ ಶಾಸಕರು, ಮಾಜಿ ಶಾಸಕರು, ಇವರೆಲ್ಲರೂ ಇದ್ದಾರೆಂದು ಹೇಳಿದರು. ನಮ್ಮ ಸರ್ಕಾರ ಇದ್ದಾಗ ಶ್ರೀಮಾನ್ ದೇವೇಗೌಡರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗಲೂ ಕೂಡ ಇದೇ ಪ್ರಶ್ನೆ ಉದ್ಭವಿಸಿ ಇದರ ಬಗ್ಗೆ ಸದನ ಸಮಿತಿ ರಚಿಸಿ ಮಾನ್ಯ ಬಿ.ಬಿ.ಶಿವಪ್ಪನವರನ್ನು ಇದರ ಸದಸ್ಯರನ್ನಾಗಿ ಮಾಡಿದ್ದರು. ಪತ್ರಿಕೆಗಳಲ್ಲಿ ಬರುತ್ತಿರುವ ಹಾಗೆ ಈ ವ್ಯವಹಾರದಲ್ಲಿ ಶಾಸಕರು, ಮಂತ್ರಿಗಳು, ಇದ್ದಾರೆಂದು ಸಾರ್ವಜನಿಕರು ಹೇಳುತ್ತಿದ್ದರೆ ನಮಗೂ ಕೂಡ ನಾಚಿಕೆಯಾಗುತ್ತದೆ. ಜನಗಳು ಕೂಡ ನಮ್ಮನ್ನು ಇವತ್ತು ಸಂಶಯದ ದೃಷ್ಟಿಯಿಂದ ನೋಡತಕ್ಕಂಥದ್ದು ಇದೆ. There should be an end to such kind of an allegations. ಇದರಲ್ಲಿ ಕೆಲವರು ನ್ಯಾಯಬದ್ಧವಾಗಿ ವ್ಯವಹಾರದಲ್ಲಿರಬಹುದು, ನ್ಯಾಯಬದ್ಧವಾಗಿ ಇದರಲ್ಲಿ ಯಾವ್ಯಾವ ಮಂತ್ರಿಗಳು, ಮಾಜಿ ಮಂತ್ರಿಗಳು, ಹಾಲಿ ಶಾಸಕರು, ಮಾಜಿ ಶಾಸಕರು, ಇದ್ದಾರೆ, ಅಕ್ರಮವಾಗಿ ಯಾರ್ಯಾರು ಇದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿ ಹೈಕೋರ್ಟಿನ ನ್ಯಾಯಾಧೀಶರ ಮೂಲಕ ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ಮಾಡಿಸಿ; ಇಂಟರ್‌ನೆಟ್‌ನಲ್ಲಿ ಹಾಕಿಸಿ ಬಿಡಿ. ಹೀಗಾದರೆ ಇಂಥಿಂಥವರು ಇಂಥಿಂಥ ಬ್ಯುಸಿನೆಸ್ ಮಾಡುತ್ತಾರೆಂದು ಸಾರ್ವಜನಿಕರುಗಳಿಗೆ ಗೊತ್ತಾದಾಗ ನಮಗೆ ಸ್ವಲ್ಪ ತಲೆ ಎತ್ತಿಕೊಂಡು ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಇದರಲ್ಲಿ ಯಾರ್ಯಾರು ಏನೇನು ಮಾಡಿದ್ದಾರೆನ್ನುವ ವಿಚಾರ ಗೊತ್ತಾಗಬೇಕು, ಇದರಲ್ಲಿ ಯಾವ್ಯಾವ ಮಂತ್ರಿಗಳು, ಶಾಸಕರು, ಅವರ ಸಂಬಂಧಿಕರು ಯಾರ್ಯಾರು ಇದ್ದಾರೆಂಬುದು ಸಾರ್ವಜನಿಕರಿಗೆ ಗೊತ್ತಾಗಬೇಕು. ಏಕೆಂದರೆ, ತಾವು ಮಂತ್ರಿಗಳಾದ ಮೇಲೆ ಇದನ್ನು ರಿವ್ಯೂ ಮಾಡಬೇಕಾದರೆ ಎಲ್ಲಾ ವಿಷಯಗಳನ್ನು ತಿಳಿದುಕೊಂಡಿರುತ್ತೀರಿ, ಆದುದರಿಂದ, ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಮಾಡಿಸುತ್ತೇನೆ ಎನ್ನುವ ಉತ್ತರ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿ.ಮುನಿಯಪ್ಪ; ಈ ರಾಜ್ಯದಲ್ಲಿ ಒಂದು ಒಳ್ಳೆಯ ಉದ್ದೇಶದಿಂದ ಈ ಗಣಿಗಾರಿಕೆ ನಡೆಯುತ್ತಿದೆ. ರಾಜ್ಯದಲ್ಲಿರುವ ಖನಿಜ ನಿಕ್ಷೇಪಗಳನ್ನು ಉತ್ಪಾದನೆ ಮಾಡಿ, ವಿದೇಶಿ ವಿನಿಮಯವನ್ನು ಗಳಿಸಿ, ರಾಜ್ಯದ ರಾಯಲ್ಟಿಯನ್ನು ಹೆಚ್ಚು ಮಾಡಿ, ಸಾರ್ವಜನಿಕ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮಾಡಬೇಕು ಎನ್ನುವ ಒಳ್ಳೆಯ ಉದ್ದೇಶ ಇದರಲ್ಲಿದೆ. ಆದರೆ, ಇದರಲ್ಲಿ ಮಂತ್ರಿಗಳಾಗಲಿ, ರಾಜಕಾರಣಿಗಳಾಗಲಿ ಕಾನೂನು ಬದ್ಧವಾಗಿ ಇರಬಾರದೆಂದು ಎಲ್ಲೂ ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅದು ಆ ರೀತಿ ಅಲ್ಲ, ಇದರಲ್ಲಿ ಭಾಗವಹಿಸಿರುವ ಮಂತ್ರಿಗಳು, ಹಾಗೂ ಅವರ ರಕ್ತಸಂಬಂಧಿಗಳ ಹೆಸರುಗಳು ಹೊರಗಡೆ ಬರಲಿ. ಇದರಲ್ಲಿ ಏನಿದೆ? ಇದರಿಂದ ನಿಮಗೆ ಹಾಗೂ ನಮಗೂ ಅನುಕೂಲವಾಗುತ್ತದೆ.

ಶ್ರೀ ವಿ.ಮುನಿಯಪ್ಪ: ತಾವು ಹೇಳುವುದು ಒಳ್ಳೆಯದು; ಇದರಲ್ಲಿ ರಾಜಕಾರಣಕ್ಕಾಗಿ ಆರೋಪ ಮಾಡತಕ್ಕಂಥ ಅವಕಾಶ ಇದೆಯೇ ಹೊರತು ಬೇರೆ ಏನೂ ಇಲ್ಲ. ಇದರ ಬಗ್ಗೆ ಕ್ವಾರಿ ಲೀನ್ರ್ಸ್ ರವರನ್ನು ಹಾಗೂ ಅಸೋಸಿಯೇಷನ್ರವರ ಜೊತೆಯಲ್ಲಿ ಚರ್ಚೆ ಮಾಡಿದಾಗ ನೂರಕ್ಕೆ ಎಪ್ಪತ್ತೈದು ಭಾಗ ಕ್ವಾರಿಂಗ್ ಲೀನ್ರ್ಸ್ ಯೂನಿಟ್ ಅಂತ ಏನು ಇದೆ ಅಂದರೆ ಸ್ಟೋನ್ ಕಟಿಂಗ್, ಪಾಲೀಷಿಂಗ್, ಇವರೆಲ್ಲರೂ ಕೆ.ಎನ್.ಎಫ್.ಸಿ.ಯಲ್ಲಿ ಡಿಫಾಲ್ಟರ್ಸ್ ಆಗಿದ್ದಾರೆ. ಇದು ಸಂಪೂರ್ಣವಾಗಿ ನಿಂತು ಹೋಗಿ ಇವತ್ತು ಸಿಕ್ ಯೂನಿಟ್ ಆಗಿದೆ. ಗಣಿಗಾರಿಕೆಯಲ್ಲಿ ಸುಮಾರು ನೂರಕ್ಕೆ ಐವತ್ತರಷ್ಟು ರಫ್ತು ಮಾಡುತ್ತಿದ್ದುದು ಇವತ್ತು ಎಲ್ಲಾ ನಿಂತು ಹೋಗಿರುವ ವಿಚಾರ ಬಹುಶಃ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ ಎಂದು ನಾನಾದರೂ ಭಾವಿಸುತ್ತೇನೆ. ದುರಾದೃಷ್ಟವಶಾತ್ ಇದಕ್ಕೆ ಇವತ್ತು ಇಲ್ಲಸಲ್ಲದ ಹೆಚ್ಚಿನ ಪ್ರಚಾರ ಕೊಟ್ಟು ಆ ಮಾರ್ಕೆಟ್ ಸಂಪೂರ್ಣವಾಗಿ ಕುಸಿದಿರುವ ಪರಿಸ್ಥಿತಿ ಬಂದಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಕರ್ನಾಟಕದ ರಾಜಕಾರಣಿಗಳ ಮೇಲೆ ಇದೊಂದು ಕಪ್ಪು ಚುಕ್ಕೆ. ಏಕೆ ಈ ವಿಚಾರ ಹೇಳಿದೆ ಎಂದರೆ, ಇವತ್ತು ದೆಹಲಿಯಲ್ಲಿ ಏನು ಹೇಳುತ್ತಾರೆಂದರೆ ಐ.ಎಂ.ಎಫ್.ಎಲ್. ಲಾಬಿ ಮತ್ತು ಗ್ರಾನೈಟ್ ಲಾಬಿಗಳ ಬಗ್ಗೆ ಜಾಸ್ತಿ ಹೇಳುತ್ತಾರೆ. ಆದ್ದರಿಂದ ಇವೆರಡರಲ್ಲಿ ಯಾರ್ಯಾರು ಇದ್ದಾರೆ? ಯಾರ್ಯಾರು ಡಿಸ್ಟಿಲರಿ ಓನರ್ಸ್? ಎನ್ನುವುದರ ಬಗ್ಗೆ, ಮುಖ್ಯವಾಗಿ ಗ್ರಾನೈಟ್ ಬಗ್ಗೆ ಯಾರ್ಯಾರು ಇದ್ದಾರೆ ಎನ್ನುವುದರ ತನಿಖೆ ಮಾಡಲು ಯಾವುದೇ ಹೈಕೋರ್ಟಿನ ಸಿಟ್ಟಿಂಗ್ ಜಡ್ಜ್ ಕೈಯಿಂದಲೇ ತನಿಖೆ ಮಾಡಿಸಿ. ಇದುವರೆವಿಗೂ ಅಂದರೆ 50 ವರ್ಷಗಳಿಂದ ಯಾರ್ಯಾರು ಶಾಸಕರಾಗಿದ್ದಾರೆ ಅವರ ಅಣ್ಣ ತಮ್ಮಂದಿರು ಅಥವಾ ಅವರ ಹೆಂಡತಿಯರು, ಸ್ಪೌನ್, ಕಸಿನ್ಸ್, ಇವರೆಲ್ಲರೂ ಆಚೆ ಬರಲಿ.

ಶ್ರೀ ವಿ.ಮುನಿಯಪ್ಪ: ಹಿಂದೆ ಇದ್ದಂಥ ಸರ್ಕಾರ ಇದರ ಬಗ್ಗೆ ವಿಚಾರಣೆ ಮಾಡಲು ಸದನ ಸಮಿತಿಯನ್ನು ನೇಮಕ ಮಾಡಿತ್ತು. ಸದನ ಸಮಿತಿಯವರು ಸಂಪೂರ್ಣವಾಗಿ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಇದರಲ್ಲಿ ಯಾರ್ಯಾರು ಇದ್ದಾರೆ ಎನ್ನತಕ್ಕಂಥ ವಿಷಯವನ್ನು ಮತ್ತು ಶಾಸಕರು ಹಾಗೂ ಮಂತ್ರಿಗಳು ಯಾರ್ಯಾರು ಇದ್ದಾರೆ ಎಂಬುದರ ಬಗ್ಗೆಯೂ ಸಹ ವರದಿಯಲ್ಲಿ ಸೂಚಿಸಿದ್ದಾರೆ.

ಶ್ರೀ ಬಿ.ಬಿ.ಶಿವಪ್ಪ: ಆ ವರದಿಯನ್ನು ಸದನದ ಮುಂದೆ ಮಂಡಿಸಬೇಕು.

ಶ್ರೀ ವಿ.ಮುನಿಯಪ್ಪ: ಸದನ ಸಮಿತಿ ತನ್ನ ವರದಿಯನ್ನು ಸದನದ ಮುಂದೆ

ಮಂಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಒಂದು ವೇಳೆ ಮಂಡಿಸದೇ ಇದ್ದರೆ ಖಂಡಿತ ಸದನದ ಮುಂದೆ ನಾನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸಿಂಧ್ಯಾರವರು ಈಗಾಗಲೇ ವ್ಯಕ್ತಪಡಿಸಿರುವಂತೆ ರಾಷ್ಟ್ರಮಟ್ಟದಲ್ಲಿ ನಮ್ಮ ರಾಜ್ಯದ ಬಗ್ಗೆ ಕಪ್ಪು ಚುಕ್ಕೆ ಏಕೆ ಮೂಡಿದೆ ಎಂದರೆ, ನನ್ನ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಗುತ್ತಿಗೆದಾರರಿಂದ ಸರ್ಕಾರಕ್ಕೆ 72 ಕೋಟಿ ರೂಪಾಯಿಗಳಷ್ಟು ಬಾಕಿ ಹಣ ಬರಬೇಕಾಗಿದೆ ಹಾಗೂ ಅರಣ್ಯ ಪ್ರದೇಶದಲ್ಲಿ ಕಾನೂನನ್ನು ಮೀರಿ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಇದು ತಮಗೂ ಸಹ ಗೊತ್ತಿರುವಂಥ ವಿಷಯವಾಗಿದೆ. ಇವತ್ತಿನ ದಿವಸ ಖಾನಾಪುರದಲ್ಲಿ 100 ಎಕರೆ ಅರಣ್ಯಪ್ರದೇಶವನ್ನು ಗಣಿಗಾರಿಕೆಗೆ ಕೊಟ್ಟಿರತಕ್ಕಂಥ ಪ್ರಕರಣಗಳು ಇದೆ. ಈ ರೀತಿಯಾಗಿ ಗಣಿಗಾರಿಕೆಯಲ್ಲಿ ಆಗಿರುವಂಥ ಅವ್ಯವಹಾರದೊಳಗೆ ಯಾರ್ಯಾರು ಸೇರಿದ್ದಾರೆ ಎನ್ನತಕ್ಕಂಥ ನಿಜವಾದ ಸಂಗತಿ ಬಯಲಿಗೆ ಬರಬೇಕು. ಆ ದೃಷ್ಟಿಯಿಂದ ಸದನ ಸಮಿತಿ ವರದಿಯ ಜೊತೆಗೆ ಇದನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಮ್ಮ ಸರ್ಕಾರ ಇದ್ದಾಗ ಸದನ ಸಮಿತಿಯ ವರದಿಯನ್ನು ಸದನದ ಮುಂದೆ ಮಂಡಿಸಲಾಗಿದೆ ಮತ್ತು ಇದರ ಬಗ್ಗೆ ಚರ್ಚೆ ಕೂಡ ಆಗಿದೆ. ಆದ್ದರಿಂದ ಈಗ ಸೀಮಿತವಾಗಿರತಕ್ಕಂಥದಕ್ಕೆ ಒಬ್ಬ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ಮಾಡಿಸಿ. ಇಲ್ಲದಿದ್ದರೆ ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಿ. ಏಕೆಂದರೆ ಸಿಬಿಐ ಬಿಜೆಪಿ ಸರ್ಕಾರದ ಹಿಡಿತದಲ್ಲಿದೆ. Why it should not be referred to it? Why should we carry on with this black tag?

ಶ್ರೀ ವಿ.ಮುನಿಯಪ್ಪ: ನಮ್ಮ ಕಾರ್ಯದರ್ಶಿಯವರಿಂದ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಇದರ ಪ್ರಕಾರ ಹಿಂದಿನ ಸರ್ಕಾರದವರು ಸದನ ಸಮಿತಿಯ ವರದಿಯನ್ನು ಸದನದ ಮುಂದೆ ಮಂಡಿಸಿದ್ದಾರೆ. ಇದರಲ್ಲಿ ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ವರದಿ ಕೊಟ್ಟಿದ್ದಾರೆ. ಆದ್ದರಿಂದ ಮತ್ತೊಂದು ಸಾರಿ ನ್ಯಾಯಾಂಗ ತನಿಖೆ ಮಾಡತಕ್ಕಂಥ ಅವಕಾಶ ಇಲ್ಲ. ಇದರಲ್ಲಿ ರಾಜಕಾರಣಿಗಳು ಇರಬಹುದು ಎನ್ನುವುದಾದರೆ ಮೂರು ವರ್ಷಗಳ ಹಿಂದಿನಿಂದ ಗಣಿಗಾರಿಕೆಗೆ ಲೈಸೆನ್ಸ್ ಪಡೆದುಕೊಂಡಿರತಕ್ಕಂಥ ಸುಮಾರು 240 ಜನರ ಹೆಸರುಳ್ಳ ಪಟ್ಟಿಯನ್ನು ಕೊಟ್ಟಿದ್ದೇನೆ. ಇದರಲ್ಲಿ ರಾಜಕಾರಣಿಗಳು ಯಾರ್ಯಾರು ಇದ್ದಾರೆ ಎಂಬುದನ್ನು ತಾವು ಪರಿಶೀಲನೆ ಮಾಡಬಹುದು. ಉಳಿದಿರತಕ್ಕಂಥ ವಿಚಾರದ ಬಗ್ಗೆ ನಮ್ಮ ಇಲಾಖೆಯ ಹಂತದಲ್ಲಿ ವಿಚಾರ ಮಾಡಿಸಿ ವರದಿಯನ್ನು ಕೊಡುತ್ತೇನೆ.

ಕೊರಗ ಜನಾಂಗದ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ.